"ನಿಜ. ನಿಮ್ಮಂಥ ಗಂಡಸರನ್ನು ಈ ಕಣ್ಣೀರು ಕರಗಿಸಲ್ಲ" ಎಂದು ಹೇಳಿದವಳೆ ಹೊರ ನಡೆದೇ ಬಿಟ್ಟಳು.

"ಆಗಾಗ ಇಂಥ ಶಾಕ್ ಟ್ರೀಟ್‌ಮೆಂಟ್ ಇರಬೇಕು" ಎಂದುಕೊಂಡ ಸಂಜೀವ್.

ಬೈಕ್ ಸ್ಟಾರ್ಟ್ ಮಾಡುವಾಗ ಶೈಲಜಾಳಿಂದ ಫೋನ್.

"ಎಲ್ಲಿದ್ದೀರಾ?"

"ಯಾಕೆ" ಎಂದ ಸ್ವಲ್ಪ ಕೋಪದಿಂದ.

"ಏನಿಲ್ಲ. ಬರೋವಾಗ ತರಕಾರಿ ತೆಗೆದುಕೊಂಡು ಬನ್ನಿ."

"ಮನೇಲಿ ಫ್ರೀಯಾಗಿ ಇರ್ತೀಯಾ ತಾನೆ. ಮಾರ್ಕೇಟ್‌ಗೆ ಹೋಗಿ ತರೋಕೇನು" ಎಂದ ಕೋಪದಿಂದ.

"ಏನೋ ಸಾಹೇಬರು ಗರಂ ಆಗಿದ್ದಾರೆ, ನಿಮ್ಮ ಫ್ರೆಂಡ್ ಸ್ರವಂತಿ ಜೊತೆ ಮತ್ತೆ ಜಗಳನಾ?"

"ನಿನಗೆ ಹೇಗೆ ಗೊತ್ತು."

"ಮಾತಿನಲ್ಲೇ ಗೊತ್ತಾಗುತ್ತೆ ಬಿಡಿ" ಎಂದು ಫೋನ್ ಕಟ್ ಮಾಡಿದಳು.

ಸ್ರವಂತಿ, ಶೈಲಜಾ ಒಳ್ಳೆಯ ಸ್ನೇಹಿತೆಯರು. ಸದಾ ಫೋನಿನಲ್ಲೆ ಇವರ ಮಾತುಕತೆ. ಬಹುಶಃ ಟ್ರಾನ್ಸ್‌ಫರ್ ಡ್ರಾಮಾ ಬಗ್ಗೆ ತಿಳಿದುಕೊಂಡಳೇ ಹೇಗೆ?

★★★

ಮನೆಯೊಳಗೆ ಕಾಲಿಟ್ಟಾಗ ಧರಣಿ ಓಡಿಬಂದು "ಮಮ್ಮಿ..." ಅಂತ ತಬ್ಬಿಕೊಂಡಳು.

"ಹೋಂವರ್ಕ್ ಸ್ಟಾರ್ಟ್ ಮಾಡಿಬಿಟ್ಟಿರಾ ಆಗ್ಲೇ."

"ಸ್ಟಾರ್ಟ್ ಮಾಡೋದು ಏನು, ಎಲ್ಲಾ ಮುಗಿಸಿಬಿಟ್ಟೆ. ತಾತ ಹೆಲ್ಪ್ ಮಾಡಿದ್ರು" ಎಂದಳು ನಗುತ್ತಾ.

ಅಪ್ಪನ ಕಡೆ ನೋಡಿದಳು.

"ಏನೋ ಇಬ್ರೂ ಸೇರಿ

